**O.S.31/2018 D.W.1**

ದಿನಾಂಕಃ **01.04.2022** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.__

ಮುಖ್ಯ ವಿಚಾರಣೆಃ ಪ್ರತಿವಾದಿಯ ಪರ ಮಾನ್ಯ **AGP** ಯವರಿಂದಃ

ನನ್ನ ಮುಖ್ಯ ವಿಚಾರಣೆಯನ್ನು ಲಿಖಿತವಾಗಿ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿರುತ್ತದೆ. ಅದರ ಪ್ರತೀ ಪುಟಕ್ಕೂ ನಾನೇ ರುಜು ಮಾಡಿರುತ್ತೇನೆ.

ಪಾಟೀ ಸವಾಲುಃ ವಾದಿಯ ಪರ ಮಾನ್ಯ ಶ್ರೀ **GMV** ವಕೀಲರಿಂದಃ

ಬಾಳೆಹೊನ್ನೂರಿನಿಂದ ಕಳಸಕ್ಕೆ ಹೋಗುವ ರಸ್ತೆಯ ಬಗ್ಗೆ ನನಗೆ ಗೊತ್ತಿದೆ. ಕರ್ನಾಟಕದಲ್ಲಿ ಇರುವ ರಸ್ತೆಯಲ್ಲಿ ಹೆಚ್ಚು ಅಪಘಾತವಾಗುವ ರಸ್ತೆಯನ್ನು ಗುರುತಿಸಿ ಆ ರಸ್ತೆಯನ್ನು ಅಗಲೀಕರಣ ಮಾಡುವ ಕಾರ್ಯವನ್ನು ನಮ್ಮ ಇಲಾಖೆಯು ಮಾಡುತ್ತಿದ್ದು ಬಾಳೆಹೊನ್ನೂರಿನಿಂದ ಕಳಸಕ್ಕೆ ಹೋಗುವಾಗ ಮಾಗುಂಡಿಯ ಜಂಕ್ಷನ್ ನ ರಸ್ತೆಯಲ್ಲಿ ಅಪಘಾತ ಹೆಚ್ಚು ಆಗುವ ಕಾರಣ ಸದರಿ ಜಂಕ್ಷನ್ ನಲ್ಲಿ ಅಪಘಾತಗಳು ಏಕೆ ಆಗುತ್ತದೆ ಎಂದು ವೈಜ್ಞಾನಿಕವಾಗಿ ಪರಿಶೀಲನೆ ಮಾಡಿ ಸದರಿ ರಸ್ತೆಯಲ್ಲಿ ಅಪಘಾತ ಕಡಿಮೆ ಮಾಡುವ ಸಲುವಾಗಿ ಕ್ರಮಗಳನ್ನು ಕೈಗೊಂಡಿರುತ್ತೇವೆ ಸದರಿ ಜಾಗದಲ್ಲಿ ಇರುವ ಗದ್ದೆಯಲ್ಲಿ ನಾವು ರಿವಿಟ್‌ಮೆಂಟ್ ಅನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರಿಂದ 4 ರಲ್ಲಿ ಕಾಣುತ್ತಿರುವ ಗದ್ದೆಯ ಜಾಗವನ್ನು ರಸ್ತೆಯ ಕೆಳ ಮಟ್ಟಕ್ಕಿಂತ ಇದ್ದ ಗದ್ದೆಯ ಜಾಗದಲ್ಲಿ ರಿವಿಟ್‌ಮೆಂಟ್ ಹಾಕುವ ಮೂಲಕ ರಸ್ತೆಯನ್ನು ಮಾಡಿರುತ್ತೇವೆ ಎಂದರೆ ರಸ್ತೆಯ ಜಾಗದಲ್ಲಿಯೇ ನಾವು ಟೌ ಹಾಕಿರುತ್ತೇವೆ ಹೊರತು ಬೇರೆ ಯಾವುದೇ ಜಾಗದಲ್ಲಿ ನಾವು ಟೌ ಅನ್ನು ಹಾಕಿರುವುದಿಲ್ಲ. ನಿಪಿ.1 ರಲ್ಲಿ ಕಾಣುತ್ತಿರುವ ರಸ್ತೆಯ ಮಧ್ಯ ಭಾಗದಿಂದ 40 ಅಡಿಗಳಿಗೆ ತಡೆಗೋಡೆಯನ್ನು ಮಾಡಿರುತ್ತೇವೆ ಎಂದರೆ ಸದರಿ ರಸ್ತೆಯು State Highway ಆಗಿರುವುದರಿಂದ ರಸ್ತೆಯ ಮಾರ್ಜಿನ್ ನಿಂದ ರಸ್ತೆಗಾಗಿ ತೆಗೆದುಕೊಳ್ಳಬೇಕಾದ ಜಾಗದಲ್ಲಿ ನಾವು ರಸ್ತೆಯನ್ನು ಮಾಡಿರುತ್ತೇವೆ ಹೊರತು ಬೇರೆ ಜಾಗದಲ್ಲಿ ನಾವು ರಸ್ತೆಯನ್ನು ಮಾಡಿರುವುದಿಲ್ಲ.

ಬಾಳೆಹೊನ್ನೂರಿನಿಂದ ಕಳಸಕ್ಕೆ ಹೋಗುವ ರಸ್ತೆಯು ಮಾಗುಂಡಿ ಜಂಕ್ಷನ್ ನಲ್ಲಿ ಒಂದು ಕಡೆಯಿಂದ ಹೋಗುವ ರಸ್ತೆ State High way ಆಗಿದ್ದು ಒಂದು ಕಡೆಯಿಂದ ಬರುವ ರಸ್ತೆಯ ಎಂ ಡಿ ಆರ್ ಆಗಿರುತ್ತದೆ. ಸದರಿ ರಸೆತಯು State High way ಹಾಗೂ ಎಂ ಡಿ ಆರ್ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ವಾದಿಯ ಸರ್ವೇ ನಂಬರ್ ಅನ್ನು ನಾವು ಅಳತೆ ಮಾಡಿರುವುದಿಲ್ಲ, ಆದರೆ ಅದಕ್ಕೆ ಸಂಬಂಧಪಟ್ಟ ಸ್ಥಳೀಯ ಇಲಾಖೆಯವರು ಮಾಡಿರುತ್ತಾರೆ. ಈ ಬಗ್ಗೆ ಯಾವುದೇ ದಾಖಲೆಯನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸ್ಥಳೀಯ PWD ರವರು ಹಾಜರುಪಡಿಸಬೇಕಾಗುತ್ತದೆ.

ವೈ ಜಂಕ್ಷನ್ ನ ಎರಡು ಬದಿಗಳಲ್ಲಿ ಯಾವುದೇ ಕಟ್ಟಡವನ್ನು ಕಟ್ಟುವ ಆಗಿಲ್ಲ ಎಂದರೆ ಸರಿ.

ನಿಪಿ.5 ರಂತೆ ಮಾಹಿತಿಯನ್ನು ವಾದಿಗೆ ನೀಡಿರುತ್ತೇವೆ ಎಂದರೆ ಸರಿ. ದಾವಾ ಜಾಗದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು ಹಾಗೂ ಆಟೋ ಸ್ಟ್ಯಾಂಡ್ ಮತ್ತು ಬಸ್ ನಿಲ್ದಾಣ ಕಟ್ಟ ಬಾರದು ಎಂದು ವಾದಿಯು ನಮಗೆ ಮತ್ತು 2 ನೇ ಪ್ರತಿವಾದಿಗೆ ನೋಟೀಸ್ ನೀಡುವ ಮೂಲಕ ತಿಳಿಸಿರುತ್ತಾರೆ ಎಂದರೆ ಸದರಿ ಜಾಗಕ್ಕೆ ವಿವಾದಕ್ಕೆ ಸಂಬಂಧಿಸಿದಂತೆ PWD ಚಿಕ್ಕಮಗಳೂರು ಮತ್ತು ಕೊಪ್ಪ ರವರು ಆಗಿದ್ದು ನಾನು ಸ್ಥಳದ ಬಗ್ಗೆ ಪರಿಶೀಲನೆ ಮಾಡುವ ಹಾಗೇ ಇರಲಿಲ್ಲ, ಅವರೇ ಆ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ನನಗೆ ನೀಡಿದ ಪತ್ರಗಳನ್ನು ನಾನು ಸಂಬಂಧಪಟ್ಟ PWD ಚಿಕ್ಕಮಗಳೂರು ಮತ್ತು ಕೊಪ್ಪ ವಿಭಾಗಕ್ಕೆ ರವಾನಿಸಿರುತ್ತೇನೆ.

ನಾನು ಮೇಲೆ ಹೇಳಿದ ಮಾಗುಂಡಿ ಸರ್ಕಲ್ ನ ಅಪಘಾತ ವಲಯದಲ್ಲಿ ಈಗ ರಸ್ತೆಗೆ ತಾಗಿಕೊಂಡಂತೆ ಆಟೋ ನಿಲ್ದಾಣವನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತ ಜಂಕ್ಷನ್ ನಲ್ಲಿ ಯಾವುದೇ ಕಟ್ಟಡವನ್ನು ನಿರ್ಮಾಣ ಮಾಡಿದ್ದರೆ ಅದನ್ನು ತೆರವುಗೊಳಿಸುವ ಜವಾಬ್ದಾರಿ ನಮ್ಮದ್ದು ಎಂದರೆ ಸರಿ, ಸ್ಥಳೀಯ PWD ರವರು ಸಹ ಆ ಬಗ್ಗೆ ಗಮನಹರಿಸಬೇಕಾಗುತ್ತದೆ. ಈ ದಾವೆಯ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ, ಕೇವಲ ನಾನು ಐ ಆರ್ ಸಿ ಯಂತೆ ಕೆಲಸವನ್ನು ನಿರ್ವಹಿಸಿರುತ್ತೇನೆ.

ಗ್ರಾಪಂ ಯವರು ರಸ್ತೆಯ ಬದಿಯಲ್ಲಿ ಯಾವುದೇ ಕಟ್ಟಡವನ್ನು ನಿರ್ಮಾಣ ಮಾಡಬೇಕಾದರೆ ನಮ್ಮ ಇಲಾಖೆಯ ಪರವಾನಿಗೆ ಪಡೆಯಬೇಕು ಎಂದರೆ ಆ ಬಗ್ಗೆ ಸ್ಥಳೀಯ PWD ರವರಿಂದ ಪರವಾನಿಗೆಯನ್ನು ಪಡೆಯಬೇಕಾಗುತ್ತದೆ.

ವಾದಿಯು ಅರ್ಜಿಯನ್ನು ನೀಡಿದಾಗ ಸಂಬಂಧಿಸಿದ ಕಟ್ಟಡವನ್ನು ನಾವು ತೆರವುಗೊಳಿಸಬೇಕು ಎಂದರೆ ಸರಿಯಲ್ಲ. ತಕರಾರಿನಲ್ಲಿ AEE, ಚಿಕ್ಕಮಗಳೂರು ರವರಿಗೆ ಸಂಬಂಧಪಟ್ಟಿರುತ್ತದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಸಹ ನಾನು ಮರೆಮಾಚಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.